# ಜಯಲಕ್ಷ್ಮಿ ಸಾರಾಬಾಯಿ ಮತ್ತು ಕೇಶರ್ ಬಾಯಿ

ಮೂಲ : ‘Swami Vivekananda: The Great Inspirer’, ರಾಮಕೃಷ್ಣ ಶಾರದಾ ಮಿಷನ್ ಪ್ರಕಟಣೆ
ಅನುವಾದ : ಸ್ವರ್ಣಗೌರಿ

## ಜಯಲಕ್ಷ್ಮಿ ಸಾರಾಬಾಯಿ

### ಸಾಹಿತಿ, ದೇಶಪ್ರೇಮಿ

**ಸ್ವಾ**ಮಿ ವಿವೇಕಾನಂದರು ಪಾಲಿತಾನಕ್ಕೆ ಭೇಟಿಯಿತ್ತಾಗ ದಿವಾನ್ ಚುನಿಲಾಲ್ ಸಾರಾಬಾಯಿ ಹಜರತ್‌ರ ಮನೆಯಲ್ಲಿ ತಂಗಿದ್ದರು. ವಿವಾಹವಾಗಿ ಮದರಾಸಿನಲ್ಲಿ ಪತಿಯ ಮನೆಯಲ್ಲಿದ್ದ ಹಜರತ್ ಮಗಳು ಜಯಲಕ್ಷ್ಮಿ ತನ್ನ ಪತಿಯೊಂದಿಗೆ ಸ್ವಾಮಿಗಳ ದರ್ಶನಕ್ಕೆ ಬಂದಿದ್ದಳು. ಆಧ್ಯಾತ್ಮಿಕ ವಿಚಾರಗಳಲ್ಲದೆ ಇತಿಹಾಸ, ಕೃಷಿ, ಭೂಗೋಳ, ಸಾಹಿತ್ಯ, ದೇಶದ ಏಳ್ಗೆ ಇತ್ಯಾದಿಗಳ ಬಗ್ಗೆಯೂ ಸ್ವಾಮೀಜಿ ಮನೆಯವರೊಡನೆ ಚರ್ಚಿಸುತ್ತಿದ್ದರು. ಹೀಗೆ ತಮ್ಮ ಮಾತುಕತೆ ವಿಚಾರಧಾರೆಗಳ ಮೂಲಕ ಸದಾ ಅವರ ಮನಸ್ಸನ್ನು ಉನ್ನತ ಸ್ಥಿತಿಗೊಯ್ದು ಆನಂದವೀಯುತ್ತಿದ್ದರು. ಮೂರು ದಿವಸಗಳ ನಂತರ ಸ್ವಾಮೀಜಿ ನಿರ್ಗಮಿಸಿದಾಗ ಎಲ್ಲರಿಗೂ ಅತೀವ ದುಃಖವುಂಟಾಯಿತು.



ಸ್ವಾಮಿ ವಿವೇಕಾನಂದರ ಶೀಲ ಮತ್ತು ವ್ಯಕ್ತಿತ್ವ ಜಯಲಕ್ಷ್ಮಿ ಹಾಗೂ ಆಕೆಯ ಪತಿಯ ಮೇಲೆ ಗಾಢವಾದ ಪ್ರಭಾವ ಬೀರಿತು. ಅವರಿಬ್ಬರೂ ೧೮೯೨ರ ಅಕ್ಟೋಬರ್‌ನಲ್ಲಿ ಕನ್ಯಾಕುಮಾರಿಗೆ ಭೇಟಿ ಯಿತ್ತರು. (ಸ್ವಾಮೀಜಿ ಅಲ್ಲಿಗೆ ಭೇಟಿ ನೀಡುವ ಇಚ್ಛೆಯನ್ನು ವ್ಯಕ್ತಪಡಿಸಿದ್ದರು.) ಜಯಲಕ್ಷ್ಮಿ ತಾನು ‘ಪ್ರಬುದ್ಧ ಭಾರತ’ದ ಸದಸ್ಯಳಾಗಿದ್ದಲ್ಲದೆ, ಇತರರನ್ನೂ ಸದಸ್ಯರಾಗಲು ಪ್ರೇರೇಪಿಸುತ್ತಿದ್ದಳು. ಆಕೆ ಆಗರ್ಭ ಶ್ರೀಮಂತಳಾದರೂ ಸರಳತೆ, ವಿನಯ ಮತ್ತು ವೈರಾಗ್ಯಭಾವದಿಂದ ತುಂಬಿ ತುಳುಕುತ್ತಿದ್ದಳು. ಸಾಹಿತ್ಯದಲ್ಲಿ ಬಹಳ ಆಸಕ್ತಿಯಿದ್ದ ಕಾರಣ ಸ್ಥಳೀಯ ಜನರನ್ನು ಪ್ರೋತ್ಸಾಹಿಸಿ, ಆರ್ಥಿಕ ಸಹಾಯ ನೀಡಿ ಒಂದು ಪುಸ್ತಕಭಂಡಾರವನ್ನು ತೆರೆದಳು. ಸ್ವಾಮಿ ವಿವೇಕಾನಂದರನ್ನು ಆದರ್ಶವಾಗಿ ಸ್ವೀಕರಿಸಿ ಅವಳು ದೇಶಕ್ಕಾಗಿ ಜೀವನವನ್ನು ಅರ್ಪಿಸಲು ಯುವಕರನ್ನು ಹುರಿದುಂಬಿಸುತ್ತಿದ್ದಳು.

ಸ್ವಾಮೀಜಿಯವರ ವ್ಯಕ್ತಿತ್ವ ಕಿಂಚಿತ್ತಾದರೂ ಬದಲಾವಣೆ ತಾರದೆ ಹೋದೀತೆ?

*ಇನ್ನೊಬ್ಬರಿಗಾಗಿ ಮಾಡುವ ಕೆಲಸ ಅದೆಷ್ಟೇ ಕ್ಷುದ್ರವಾಗಿರಲಿ, ನಿನ್ನ ಸುಪ್ತಶಕ್ತಿಯನ್ನು ಜಾಗೃತಗೊಳಿಸುವುದು.*

*— ಸ್ವಾಮಿ ವಿವೇಕಾನಂದ (ಕೃತಿಶ್ರೇಣಿ ಸಂ. ೮, ಪು. ೧೪೯)*

## ಕೇಶರ್ ಬಾಯಿ

### ಶಕ್ತಿಯ ಅಂಶಗಳು

**ಭ**ಕ್ತಾಗ್ರೇಸರನಾದ ಬಟ್ಟೆ ವ್ಯಾಪಾರಿಯ ಪತ್ನಿ ಕೇಶರ್‌ಬಾಯಿ ವಿಧವೆಯಾಗಿದ್ದಳು. ಗುಜರಾತಿನ ಮಾಂಡವಿಯಲ್ಲಿ ವಾಸಿಸುತ್ತಿದ್ದ ಆಕೆಗೆ ಒಬ್ಬಳೇ ಮಗಳು. ಸಾಧು ಸಂತರೆಂದರೆ ಅತೀವ ಭಕ್ತಿಯಿದ್ದ ಆಕೆ ಆಗಾಗ್ಗೆ ಅವರನ್ನು ಸತ್ಕರಿಸುತ್ತಿದ್ದಳು. ಈ ಗುಣದಿಂದಾಗಿ ಒಮ್ಮೆ ಸ್ವಾಮಿ ವಿವೇಕಾನಂದರು ಅವರ ಮನೆಯಲ್ಲಿ ತಂಗುವ ಸೌಭಾಗ್ಯ ಆಕೆ ಒದಗಿಬಂದಿತು. ಅವರ ಮನೆಯಲ್ಲಿದ್ದಾಗ ಸ್ವಾಮೀಜಿ ನಿತ್ಯವೂ ಅದೆಷ್ಟು ಮನಮೋಹಕವಾಗಿ ಹಾಡುತ್ತಿದ್ದರೆಂದರೆ ನೆರೆಹೊರೆಯ ಹೆಂಗಸರೆಲ್ಲರೂ ಆ ಗಾನಮಾಧುರ್ಯಕ್ಕೆ ಆಕರ್ಷಿತರಾಗಿ ಸ್ವಾಮೀಜಿಯವರನ್ನು ಸುತ್ತುವರಿಯುತ್ತಿದ್ದರು. ಒಮ್ಮೆ ಸ್ವಾಮೀಜಿ ಅವರನ್ನು ಕುರಿತು, ‘‘ತಾಯಂದಿರಾ, ನೀವೆಲ್ಲರೂ ಶಕ್ತಿಯ ಅಂಶಗಳು. ನೀವುಗಳು ಸಕ್ರಿಯವಾಗಿ ಪಾಲ್ಗೊಳ್ಳದಿದ್ದರೆ ನಮ್ಮ ದೇಶ ಜಾಗೃತವಾಗುವುದಿಲ್ಲ. ದೇಶಕ್ಕೆ ಅರ್ಪಿತವಾಗದ ಜೀವನ ಸುಮ್ಮನೆ ವ್ಯರ್ಥ. ಹಸಿರಾಗಿದ್ದಾಗ ಎಲೆಯು ಉಪಯೋಗಕ್ಕೆ ಬರುವುದು. ಒಣಗಿದ ನಂತರ ಅವನ್ನು ಎಸೆಯುತ್ತಾರೆ ಅಥವಾ ಸುಡುತ್ತಾರೆ. ಜೀವನ ಒಂದೇ ಬಾರಿ ಬರುವುದು. ಅದನ್ನು ಸಾರ್ಥಕಗೊಳಿಸಿಕೊಳ್ಳಿ’’ ಎಂದು ಹುರಿದುಂಬಿಸಿದರು.



ಸ್ವಾಮಿ ವಿವೇಕಾನಂದರ ನಿರ್ಗಮನದ ನಂತರ ಕೇಶರ್‌ಬಾಯಿ ಸ್ವಾಮೀಜಿಯವರನ್ನು ಹಾಗೂ ಅವರ ಸ್ಫೂರ್ತಿದಾಯಕ ನುಡಿಗಳನ್ನು ಸಂಪೂರ್ಣವಾಗಿ ಮರತೇಬಿಟ್ಟಳು. ದಿನಗಳು ಉರುಳಿದಂತೆ ಒಂದು ದಿನ ಕೇಶರ್‌ಬಾಯಿ ತನ್ನ ಒಬ್ಬಳೇ ಮಗಳನ್ನು ಕಳೆದುಕೊಂಡು ಹುಚ್ಚಿಯಂತಾದಳು. ದುಃಖತಪ್ತ ಕೇಶರ್‌ಬಾಯಿ ಪೋರ್‌ಬಂದರಿನಲ್ಲಿದ್ದ ತವರು ಮನೆಗೆ ಹೋದಳು. ಅಲ್ಲಿ ಗಾಂಧೀಜಿಯವರ ಉಪನ್ಯಾಸಗಳನ್ನು ಕೇಳಿ, ಸ್ವಾಮೀಜಿಯವರ ನುಡಿಗಳ ನೆನಪಾಯಿತು. ಅಂದಿನಿಂದ ಸ್ವಾತಂತ್ರ್ಯ ಚಳುವಳಿಯಲ್ಲಿ ಸಕ್ರಿಯವಾಗಿ ಭಾಗವಹಿಸಿ, ತನ್ನ ಜೀವನವನ್ನು ಆ ಮಹಾಯೋಗಿಯ ವಾಣಿಗೆ ಅನುಸಾರವಾಗಿ ರೂಪಿಸಿಕೊಂಡು ಸಾರ್ಥಕ್ಯ ಪಡೆದಳು.

*‘ವಿಶ್ವವ್ಯಕ್ತಿತ್ವ ಪಡೆಯಬೇಕಾದರೆ ಈ ಕ್ಷುದ್ರ ಸೆರೆಬದ್ಧ ವ್ಯಕ್ತಿತ್ವ ಹೋಗಬೇಕು’ — ಸ್ವಾಮಿ ವಿವೇಕಾನಂದ (ಕೃತಿಶ್ರೇಣಿ, ಸಂ.೧, ಪು.೧೬)*